ನಿ.72-(93)

# ನಗರಾಭಿವೃದ್ಧಿ ಇಲಾಖೆ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಹಾಂತೇಶ್ ಮ ಕವಟಗಿಮಠ ಇವರು ನಿಯಮ 72 ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ.

---

**ವಿಷಯ:**

ಬೆಳಗಾವಿ ಕೇಂದ್ರ ಬಸ್ ನಿಲ್ದಾಣದ ಪ್ರವೇಶ ದ್ವಾರ ಅವ್ಯವಸ್ಥೆಯ ಆಗರವಾಗಿದ್ದು, ಘನ ತ್ಯಾಜ್ಯ ರಾಶಿಯಿಂದ ತುಂಬಿ ಗಬ್ಬು ನಾರುತ್ತಿದೆ. ಘನ ತ್ಯಾಜ್ಯ ವಿಲೇವಾರಿ ನಿರ್ವಹಣೆಯ ಅವ್ಯವಸ್ಥೆಯಿಂದ ದುರ್ವಾಸನೆ ಬೀರುತ್ತಿದ್ದು ಪ್ರಯಾಣಿಕರು, ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುತ್ತಿರುವ ವಿಚಾರವಾಗಿ ನಿಯಮ-72ರಡಿ ಮಂಡಿಸಿರುವ ಸೂಚನಾ ಪತ್ರ.

**ಉತ್ತರ:**

ಬೆಳಗಾವಿ ಮಹಾನಗರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಯಲ್ಲಿ ಮನೆ ಕಸ ಸಂಗ್ರಹಣೆ ಎಲ್ಲಾ 58 ವಾರ್ಡ್ ಗಳಿಂದ ಶೇ. 100 ರಷ್ಟು ಸಂಗ್ರಹಣೆಯಾಗುತ್ತಿದ್ದು, ಶೇ. 55.17% ರಷ್ಟು ಕಸ ವಿಂಗಡಣೆಯಾಗುತ್ತಿದೆ ಹಾಗೂ ಶೇ. 82% ರಷ್ಟು ಕಸ ಸಂಸ್ಕರಣೆ ಮಾಡುವ ಮೂಲಕ ತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.

ಬೆಳಗಾವಿ ನಗರದ ಕೇಂದ್ರ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಮುಖ್ಯ ಮೀನು ಮಾರುಕಟ್ಟೆ ಬೋಗಾರವೇಸ್ ಹಾಗೂ ಇತರೇ ಪ್ರದೇಶಗಳು ದಂಡು ಮಂಡಳಿ, ಬೆಳಗಾವಿ ರವರ ಆಡಳಿತಕ್ಕೆ ಒಳಪಟ್ಟಿದ್ದು, ಅವುಗಳ ಸ್ವಚ್ಛತಾ ಕಾರ್ಯವನ್ನು ಸದರಿಯವರು ನಿರ್ವಹಿಸುತ್ತಿದ್ದಾರೆ.

---

ಸಂಖ್ಯೆ:ನಅಇ 55 ಎಸಿಬಿ 2021(ಇ).

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು